ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ತಾಂ.ಶಿ.ಇ 03 ಸಿಡಿಸಿ(1) 2019-20

ಆಯುಕ್ತರ ಕಚೇರಿ
ತಾಂತ್ರಿಕ ಶಿಕ್ಷಣ ಭವನ
ಅರಮನೆ ರಸ್ತೆ, ಬೆಂಗಳೂರು-56001
16ನೇ ಎಪ್ರಿಲ್ 2021

## ಜ್ಞಾಪನ

ವಿಷಯ: ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಲಿಕಾ ನಿರ್ವಹಣಾ ವ್ಯವಸ್ಥೆ (LMS) ಗೆ ಬೇಕಾಗಿರುವ "ಕಂಟೆಂಟ್ ಡೆವಲೊಪ್‌ಮೆಂಟ್" ಮಾಡುವ ಬಗ್ಗೆ.

ಉಲ್ಲೇಖ: ದಿನಾಂಕ:09/04/2021ರಂದು ಮಾನ್ಯ ಆಯುಕ್ತರು, ಪ್ರಾಚಾರ್ಯರುಗಳಿಗೆ ವಿಡಿಯೋ ಸಂವಾದದಲ್ಲಿ ನೀಡಿರುವ ಸೂಚನೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:09/04/2021ರಂದು ಮಾನ್ಯ ಆಯುಕ್ತರು, ಪ್ರಾಚಾರ್ಯರುಗಳ ಜೊತೆ ನಡೆಸಿದ ವಿಡಿಯೋ ಸಂಭಾಷಣೆಯಲ್ಲಿ ತಿಳಿಸಿದಂತೆ, ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಲಿಕಾ ನಿರ್ವಹಣಾ ವ್ಯವಸ್ಥೆ (LMS)ಗೆ ಬೇಕಾಗಿರುವ "ಕಂಟೆಂಟ್ ಡೆವಲೊಪ್‌ಮೆಂಟ್" ನ್ನು ಆದ್ಯತೆ ಮೇರೆಗೆ ಮಾಡಬೇಕಾಗಿರುತ್ತದೆ. ರಾಜ್ಯ ಮಟ್ಟದ (State level) "ಕಂಟೆಂಟ್ ಡೆವಲೊಪ್‌ಮೆಂಟ್" ನ್ನು ತಯಾರಿಸಲು ಆಯ್ಕೆಗೊಂಡ ಪಟ್ಟಿಯನ್ನು ಈಗಾಗಲೇ ಪ್ರಕಟಿಸಿದ್ದು, ಸದರಿ ಉಪನ್ಯಾಸಕರುಗಳಿಗೆ ಪರೀಕ್ಷಾ ಕಾರ್ಯಗಳಿಂದ ವಿನಾಯಿತಿ ನೀಡಿ, ಅಪೇಕ್ಷಿಸಿದ್ದಲ್ಲಿ ಮನೆಯಿಂದಲೇ ಕಾರ್ಯನಿರ್ವಹಿಸಲು ಅವಕಾಶವನ್ನು ಮಾನ್ಯ ಆಯುಕ್ತರು ಕಲ್ಪಿಸಿರುತ್ತಾರೆ.

ಮುಂದುವರೆದು, ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರತಿ ಉಪನ್ಯಾಸಕರು/ಪ್ರಾಧ್ಯಾಪಕರುಗಳು ಮುಂಬರುವ ಸಮ ಸೆಮಿಸ್ಟರ್ (2/4/6/8)ಗಳ ಪಠ್ಯವಿಷಯಗಳಲ್ಲಿ "ಕಂಟೆಂಟ್ ಡೆವಲೊಪ್‌ಮೆಂಟ್" ನ್ನು ಸಂಸ್ಥೆ ಮಟ್ಟದಲ್ಲಿ (Institution level) ಕಡ್ಡಾಯವಾಗಿ ತಯಾರಿಸಬೇಕಾಗಿರುತ್ತದೆ. ಈ ಬಗ್ಗೆ ಪ್ರಾಚಾರ್ಯರುಗಳು ಸಮ ಸೆಮಿಸ್ಟರ್‌ಗಳಲ್ಲಿ ಪ್ರತಿ ಉಪನ್ಯಾಸಕರುಗಳಿಗೆ ಹಂಚಿರುವ ಪಠ್ಯವಿಷಯಗಳ ಮಾಹಿತಿಯನ್ನು ಈ ಕೆಳಕಂಡ ಗೂಗಲ್ ಫಾರ್ಮ್‌ನಲ್ಲಿ ದಿನಾಂಕ:21/04/2021ರ ಒಳಗಾಗಿ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಿದೆ. ಸಂಬಂಧಪಟ್ಟ ಸಂಸ್ಥೆಗಳ ಪ್ರಾಚಾರ್ಯರುಗಳು ರಾಜ್ಯ ಮಟ್ಟದ ಹಾಗು ಸಂಸ್ಥೆ ಮಟ್ಟದ "ಕಂಟೆಂಟ್ ಡೆವಲೊಪ್‌ಮೆಂಟ್"ನ್ನು ಈ ಕೆಳಕಂಡ ವೇಳಾಪಟ್ಟಿಯನ್ವಯ ಉಪನ್ಯಾಸಕರು/ಪ್ರಾಧ್ಯಾಪಕರುಗಳು ತಯಾರಿಸಲು ಸಂಪೂರ್ಣ ಉಸ್ತುವಾರಿ ವಹಿಸಿ, ಆಯುಕ್ತಾಲಯಕ್ಕೆ ಸೂಚಿಸಿದ Tracking Sheet ನಲ್ಲಿ ಮಾಹಿತಿ ನೀಡಲು ತಿಳಿಸಿದೆ.

| State level Content Schedule | |
|---|---|
| **Date** | **% of work to be done** |
| 19-Apr-21 | 20 |
| 24-Apr-21 | 30 |
| 27-Apr-21 | 40 |
| 30-Apr-21 | 50 |
| 7-May-21 | 60 |
| 15-May-21 | 70 |
| 20-May-21 | 80 |
| 25-May-21 | 90 |
| 31-May-21 | 100 |

| Institution Level Content Schedule | |
|---|---|
| **Date** | **% of work to be done** |
| 5-May-21 | 20 |
| 15-May-21 | 30 |
| 25-May-21 | 40 |
| 31-May-21 | 50 |
| 7-Jun-21 | 60 |
| 14-Jun-21 | 70 |
| 21-Jun-21 | 80 |
| 30-Jun-21 | 90 |
| 10-Jul-21 | 100 |

| | |
|---|---|
| Polytechnic Google form link | https://forms.gle/jCwQTmSuvLp5CzA99 |
| Engg. College Google form link | https://forms.gle/44ogrPJDjieEBvPGA |

ಜಂಟಿ ನಿರ್ದೇಶಕರು (ಸಿಡಿಸಿ)

ಇವರಿಗೆ: ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಹಾಗು ಇಂಜಿನಿಯರಿಂಗ್ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ-ಸೂಕ್ತ ಕ್ರಮಕ್ಕಾಗಿ.

ಪ್ರತಿ : 1. ಮಾನ್ಯ ಆಯುಕ್ತರ ಆಪ್ತ ಶಾಖೆ- ಮಾಹಿತಿಗಾಗಿ.
2. ಇ-ಆಡಳಿತ ವಿಭಾಗ- ಇಲಾಖೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.